15) ಹೊಯ್ಸಳ ವಿದ್ಯಾಪೀಠ, ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ

16) ಚಾರ ವಿದ್ಯಾಪೀಠ, ಕಾರ್ಕಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ

ಉಳಿದ 4 ಜಿಲ್ಲೆಗಳು ಅಂದರೆ ಕೊಡಗು, ಬೆಳಗಾಂ ಬೆಂಗಳೂರು ಗ್ರಾಮಾಂತರ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಆಯ್ದ ತಾಲ್ಲೂಕುಗಳಲ್ಲಿ ಈ ಸನಿವಾಸ ಶಾಲೆಗಳನ್ನು ತೆರೆಯಲಾಗುವುದು.

## ಅನುಬಂಧ - 2

**ಆಯ್ಕೆಯ ಮಾನದಂಡ**

ಅ) ಮಂಜೂರಾದ ಎಲ್ಲಾ ಸೀಟುಗಳೂ ಜಿಲ್ಲೆಯ ಅರ್ಹ ಮಕ್ಕಳಿಗೆ ಮೀಸಲಾಗಿರುತ್ತವೆ.

ಆ) ಕನಿಷ್ಠ ಪ್ರತಿ ಶತ 50 ಸೀಟುಗಳನ್ನು ಹೆಣ್ಣು ಮಕ್ಕಳಿಗೆ ನಿಗಧಿಪಡಿಸಲಾಗುತ್ತಿದೆ.

ಇ) ಕನಿಷ್ಠ ಪ್ರತಿ ಶತ 20 ಸೀಟುಗಳನ್ನು ಪರಿಶಿಷ್ಟ ಜಾತಿಯ ಮಕ್ಕಳಿಗೆ ಹಾಗೂ ಪ್ರತಿ ಶತ 5 ಸೀಟುಗಳನ್ನು ಪರಿಶಿಷ್ಟ ವರ್ಗದ ಮಕ್ಕಳಿಗೆ ನಿಗಧಿಪಡಿಸಲಾಗುತ್ತದೆ.

ಈ) ಮಂಜೂರಾದ ಸೀಟುಗಳಲ್ಲಿ ಪ್ರತಿ ಶತ 80 ಸೀಟುಗಳಿಗೆ ಕಡಿಮೆ ಇಲ್ಲದಂತೆ ಸೀಟುಗಳನ್ನು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ನಿಗಧಿಪಡಿಸಲಾಗುತ್ತದೆ.

ಉ) ಅಭ್ಯರ್ಥಿಗಳ ಆಯ್ಕೆಯನ್ನು ಈ ಕೆಳಕಂಡ ಸದಸ್ಯರನ್ನೊಳಗೊಂಡ ಆಯ್ಕೆ ಸಮಿತಿ ಮಾಡುತ್ತದೆ.

(1) ಮುಖ್ಯಕಾರ್ಯನಿರ್ವಾಹಕ ಅಧಿಕಾರಿ-ಅಧ್ಯಕ್ಷರು

(2) ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ-ಸದಸ್ಯರು

(3) ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತ ವರ್ಗದ ಜಿಲ್ಲಾ ಅಧಿಕಾರಿ-ಸದಸ್ಯರು

(4) ಸಾರ್ವಜನಿಕ ಶಿಕ್ಷಣ ಉಪನಿರ್ದೇಶಕರು-ಸದಸ್ಯ ಕಾರ್ಯದರ್ಶಿ

**ಎಸ್.ಸಿ/ಎಸ್.ಟಿ. ಪಂಗಡಗಳ ಶಾಲೆ ಕಾಲೇಜುಗಳಿಗೆ ಅನುದಾನ.**

446 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಶಾಶ್ವತ ಅನುದಾನ ರಹಿತ ಶಾಲಾ-ಕಾಲೇಜುಗಳನ್ನು ಅನುದಾದಕ್ಕೊಳಪಡಿಸುವ ವಿಷಯ ಸರ್ಕಾರದ ಮುಂದಿದೆಯೇ?*

*ಆ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

**ಅನುದಾನರಹಿತ ಶಾಲಾ ಕಾಲೇಜುಗಳು**

448 - ಶ್ರೀ ಬಿ.ಎಸ್. ಯಡಿಯೂರಪ್ಪ ( ಶಿಕಾರಿಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡ ಶಾಶ್ವತ ಅನುದಾನ ರಹಿತ ಶಾಲಾ ಕಾಲೇಜುಗಳಲ್ಲಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ನೇಮಕಾತಿಯನ್ನು ಸರ್ಕಾರದವರು ಅನುಮೋದಿಸಲು ಇರುವ ತೊಂದರೆಗಳೇನು?*

*ಆ) ಹಾಗಿದ್ದಲ್ಲಿ ಈ ಸಿಬ್ಬಂದಿಯ ನೇಮಕಾತಿಯನ್ನು ಅನುಮೋದಿಸಲು ಸರ್ಕಾರದವರು ಕೈಗೊಳ್ಳಲಾದ ಕ್ರಮಗಳೇನು?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಪ್ರಸ್ತುತ ಶಾಶ್ವತ ಅನುದಾನ ರಹಿತವಾಗಿ ಮಂಜೂರಾದ ಶಾಲಾ-ಕಾಲೇಜುಗಳಲ್ಲಿ ಮಾಡಿಕೊಂಡ ನೇಮಕಾತಿಯನ್ನು ಅನುಮೋದಿಸಲಾಗುತ್ತಿಲ್ಲ.

ಆ) ಉದ್ಭವಿಸುವುದಿಲ್ಲ.

**ವಿಶ್ವವಿದ್ಯಾಲಯಗಳಲ್ಲಿ ನಕಲಿ ಅಂಕಪಟ್ಟಿ**

450 - ಶ್ರೀ ಬಿ.ಎಸ್. ಯಡಿಯೂರಪ್ಪನವರ (ಶಿಕಾರಿಪುರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ನಕಲಿ ಅಂಕ ಪಟ್ಟಿ ಜಾಲವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

*ಆ) ಬಂದಿದ್ದಲ್ಲಿ, ಯಾವ ವಿಶ್ವವಿದ್ಯಾಲಗಳಲ್ಲಿ ಈವರೆಗೆ ಜಾಲ ಹರಡಿದೆ. ಇದನ್ನು ತಡೆಯಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

*ಇ) ಮಂಗಳೂರು ವಿಶ್ವವಿದ್ಯಾಲಯದಲ್ಲಿ ಈ ಜಾಲ ಹರಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ) ಬೆಂಗಳೂರು ವಿಶ್ವವಿದ್ಯಾಲಯ - ಬಂದಿದೆ.